## ಬಜೆಟ್ ಬಾಸ್

ಸ್ವಂತ ಆದಾಯ– ವೆಚ್ಚದ ಲೆಕ್ಕ ಇಡಲು ಬಜೆಟ್ ತಯಾರಿಸಿಕೊಳ್ಳಬೇಕಾ? ಹಾಗಿದ್ದರೆ ಬಜೆಟ್ ಬಾಸ್ ಐಫೋನ್ ಆ್ಯಪ್ ನಿಮ್ಮ ನೆರವಿಗೆ ಇದೆ. ಡೈರಿಯಲ್ಲಿ ಬರೆದಿಟ್ಟು ಕಳೆದುಕೊಳ್ಳುವ ಅಥವಾ ಎಕ್ಸೆಲ್‌ನಲ್ಲಿ ಎಡಿಟ್ ಮಾಡುವ ತಲೆನೋವಿನ ಬದಲು ಈ ಸ್ಮಾರ್ಟ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ಇದು ಚಾರ್ಟ್ ರೂಪದಲ್ಲಿ ಇರುತ್ತದೆ. ಅಂಕಿ– ಅಂಶಗಳನ್ನು ಎಂಟ್ರಿ ಮಾಡಿದರಾಯಿತು. ಒಂದು ತಿಂಗಳಿನ ನಿಮ್ಮ ಬಜೆಟ್ ಆಧಾರದ ಮೇಲೆ ನಂತರದ ಹೂಡಿಕೆ, ವೆಚ್ಚ ಇವುಗಳು ಹೆಚ್ಚು ಕಡಿಮೆ ಆದರೆ ಈ ಆ್ಯಪ್ ಅದನ್ನು ಹೈಲೈಟ್ ಮಾಡುತ್ತದೆ.




## ಫೇಸ್‌ಬುಕ್ ಎಡಿಟ್

ನಿಮ್ಮ ಸ್ಮಾರ್ಟ್‌ಫೋನ್‌ನಿಂದ ಫೇಸ್‌ಬುಕ್ ಅಪ್‌ಡೇಟ್ ಮಾಡುವಾಗ ನುಸುಳಿದ ತಪ್ಪುಗಳನ್ನು ಸರಿಪಡಿಸಲು ಇನ್ನು ಮುಂದೆ ಡೆಸ್ಕ್‌ಟಾಪ್ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್ ಇದ್ದಲ್ಲಿ ಓಡಬೇಕಿಲ್ಲ. ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಆ್ಯಪ್‌ನಿಂದಲೇ ಇವುಗಳನ್ನು ಸರಿ ಮಾಡಬಹುದು ಎಂದು ಫೇಸ್‌ಬುಕ್ ಹೇಳಿದ್ದು, ಶೀಘ್ರವೇ ಆ್ಯಪ್ ಅನ್ನು ಬಿಡುಗಡೆ ಮಾಡಲಿದೆ. ಜೊತೆಗೆ ಬದಲಾವಣೆಗಳ ಹಿಸ್ಟರಿಯನ್ನೂ ವೀಕ್ಷಿಸಬಹುದು.




## ಈಸಿಲಿಡು

ಇದು ಐಒಎಸ್ ಹಾಗೂ ಆ್ಯಂಡ್ರಾಯ್ಡ್‌ನ ಸಹಾಯಕ ಆ್ಯಪ್ ಎನ್ನಬಹುದು. ಇ–ಮೇಲ್ ಹಾಗೂ ಫೇಸ್ ಬುಕ್‌ನಲ್ಲಿರುವ ಕಾರ್ಯಕ್ರಮಗಳನ್ನು ಜಾಲಾಡಿ ಕಾರ್ಯಕ್ರಮಗಳ ಪಟ್ಟಿ ನೀಡಿ ನೆನಪಿಸುತ್ತದೆ. ಜೊತೆಗೆ ಹುಟ್ಟುಹಬ್ಬ, ಹೊಸ ಕಾಂಟ್ಯಾಕ್ಟ್, ಜನಪ್ರಿಯ ಫೋಟೊಗಳನ್ನು ಒಂದೆಡೆ ಪಟ್ಟಿ ಮಾಡುತ್ತದೆ.

## ಕೀಪ್‌ಸೇಫ್ ವಾಲ್ಟ

ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಇರುವ ಕೆಲವು ಖಾಸಗಿ ಫೋಟೊಗಳನ್ನು ಇತರರು ನೋಡದಂತೆ ಮರೆಮಾಚಲು ಈ ಆ್ಯಪ್ ನೆರವಿಗೆ ಬರುತ್ತದೆ. ಇದಕ್ಕೆ ಪಿನ್ ನಂಬರ್ ಹೊಡೆಯಬೇಕು. ಇದು ಪ್ರತ್ಯೇಕ ಫೋಲ್ಡರ್ ಮಾಡಿ ಅದನ್ನು ಲಾಕ್ ಮಾಡುತ್ತದೆ. ಎರಡನೇ ಪಿನ್ ಹೊಡೆದರೆ ನೋಡಬಹುದಾದಂತಹ ಚಿತ್ರಗಳನ್ನು ಅದರಲ್ಲಿ ಕಾಪಿಡಬಹುದು.




## ಬ್ರ್ಯೂಮಾಸ್ಟರ್

ಬ್ರಿಟನ್ ಮೂಲದ ಕಂಪೆನಿಯೊಂದು ಮನೆಯಲ್ಲೇ ಬಿಯರ್ ತಯಾರಿಸುವ ಬ್ರ್ಯೂಬೋಟ್ ಎಂಬ ಡಿವೈಸ್ ರೂಪಿಸುತ್ತಿದ್ದು, ಇದಕ್ಕೆ ಸ್ಮಾರ್ಟ್‌ಫೋನ್ ಸಂಪರ್ಕ ನೀಡಲಾಗಿದೆ. ಫೋನ್‌ನಲ್ಲಿರುವ ಆ್ಯಪ್ ನಿಂದ  ಬಿಯರ್ ರೆಸಿಪಿಯನ್ನು ನೀವೇ ಆಯ್ಕೆ ಮಾಡಬಹುದು. ಇದು ಬ್ಲೂಟೂಥ್ ಮೂಲಕ ಬ್ರ್ಯೂಬೋಟ್‌ಗೆ ಸಂಪರ್ಕ ಕಲ್ಪಿಸುತ್ತದೆ.

ಎಷ್ಟು ನೀರನ್ನು ಹಾಕಬೇಕು, ನೀರು ಎಷ್ಟು ಉಷ್ಣಾಂಶ ಹೊಂದಿರಬೇಕು ಎಂಬುದನ್ನು ಬ್ರ್ಯೂಬೋಟ್ ನಿರ್ಧರಿಸುತ್ತದೆ. ಆ್ಯಪ್ ಉಚಿತವಾಗಿದ್ದರೂ ಬಿಯರ್ ತಯಾರಿಸುವ ಯಂತ್ರಕ್ಕೆ ಸಾವಿರಾರು ಡಾಲರ್ ನೀಡಬೇಕು. ಅದಕ್ಕೂ ಮುನ್ನ ಕಂಪೆನಿ ಶುರು ಮಾಡಿರುವ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳಲು ಹಣ ನೀಡಬೇಕಂತೆ.

■ ಎಸ್. ತುಂಬೆ